ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ವಿಷಯ: 2024-25ನೇ ಸಾಲಿನ ಚಾಲೆಂಜ್ ಫಂಡ್ ಯೋಜನೆಯಡಿ ಸೃಜನಾತ್ಮಕವಾದ ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಮತ್ತು ಸುರಕ್ಷಾ ಬಿಮಾ ಯೋಜನೆಯ ನೋಂದಣಿ ಅಭಿಯಾನದ ಅನುಷ್ಠಾನದ ಸಂಬಂಧ ಆಡಳಿತಾತ್ಮಕ ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1)ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರದ ಸಂಖ್ಯೆ.ಇಡಿ 75 ವಿವಿಧ 2025, ದಿನಾಂಕ.21.04.2025.
2)ಹಣಕಾಸು ಅಧಿಕಾರಿಗಳ ಟಿಪ್ಪಣಿ ಸಂಖ್ಯೆ:ಹೆಚ್.ಆರ್.ಎಂ.ಎಸ್./325/2025-26, ದಿನಾಂಕ.03.06.2025.
3)ಮಾನ್ಯ ಕುಲಪತಿಯವರ ಆದೇಶ ದಿನಾಂಕ 21.06.2025.

****

**<u>ಪ್ರಸ್ತಾವನೆ:</u>**

ನೌಕರರು ಮತ್ತು ನಾಗರೀಕರಿಗೆ ತಮ್ಮ ಜೀವನ ಅನಿಶ್ಚಿತತೆಗಳನ್ನು ಮತ್ತು ಆರ್ಥಿಕ ತೊಂದರೆಗಳನ್ನು ಎದುರಿಸಲು ಅವಲಂಬಿತ ಕುಟುಂಬ ಸದಸ್ಯರಿಗೆ ಆರ್ಥಿಕ ಭದ್ರತೆ ಒದಗಿಸುವ ದೃಷ್ಟಿಯಿಂದ ಎಲ್ಲಾ ನೌಕರರನ್ನು ಈ ಯೋಜನೆಯಡಿ ನೋಂದಣಿ ಮಾಡಿಸುವಂತೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಆದೇಶ ನೀಡಿರುತ್ತಾರೆ.

ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ(**PMJJBY**) ಅವಧಿ ವಿಮಾ ಯೋಜನೆಯಾಗಿದ್ದು, 18ರಿಂದ 50ವರ್ಷ ವಯೋಮಿತಿಯವರಿಗೆ ವಾರ್ಷಿಕ ಪ್ರೀಮಿಯಂ **ರೂ.436/-ರೂಪಾಯಿಗಳಾಗಿರುತ್ತದೆ.** ಪಾಲಿಸಿದಾರರು ಸ್ವಾಭಾವಿಕವಾಗಿ/ಅಪಘಾತವಾಗಿ ಮರಣ ಹೊಂದಿದಾಗ ಪಾಲಿಸಿಯ ಮೊತ್ತ **ರೂ.2.00 ಲಕ್ಷಗಳು** ದೊರೆಯಲಿದೆ.

ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ(**PMSBY**) ಅಪಘಾತ ವಿಮಾ ಯೋಜನೆಯಾಗಿದ್ದು, 18ರಿಂದ 70ವರ್ಷ ವಯೋಮಿತಿಯವರಿಗೆ ವಾರ್ಷಿಕ ಪ್ರೀಮಿಯಂ **ರೂ.20/-ರೂಪಾಯಿಗಳಾಗಿರುತ್ತದೆ.** ಪಾಲಿಸಿದಾರರು ಅಪಘಾತವಾಗಿ ಮೃತ ಪಟ್ಟರೆ ಅಥವಾ ಶಾಶ್ವತ ಒಟ್ಟು ಅಂಗವೈಕಲ್ಯಕ್ಕೆ **ರೂ.2.00 ಲಕ್ಷ** ಹಾಗೂ ಶಾಶ್ವತ ಭಾಗಶಃ ಅಂಗವೈಕಲ್ಯಕ್ಕೆ **ರೂ.1.00 ಲಕ್ಷಗಳು** ದೊರೆಯಲಿದೆ.

<u>ಈ ಯೋಜನೆಗಳು ಕೆಳಕಂಡ ಷರತ್ತುಗಳು ಅನ್ವಯವಾಗುತ್ತದೆ.</u>

1. ಈ ಯೋಜನೆಗಳಡಿ ನೋಂದಣಿಯನ್ನು ವಾರ್ಷಿಕವಾಗಿ ನವೀಕರಿಸಬೇಕಾಗುತ್ತದೆ. **ಪ್ರತಿ ವರ್ಷ ಮೇ31ರಿಂದ** ಆಟೋ ಡೆಬಿಟ್ ಆಗುತ್ತದೆ.
2. ಪರಿಹಾರಕ್ಕಾಗಿ **45 ದಿನದ ಒಳಗಾಗಿ** ಅರ್ಜಿಯೊಂದಿಗೆ ಸಂಬಂಧಪಟ್ಟ ದಾಖಲೆಗಳನ್ನು ಬ್ಯಾಂಕ್ ಶಾಖಾ ವ್ಯವಸ್ಥಾಪಕರಿಗೆ ಸಲ್ಲಿಸುವುದು ಹಾಗೂ ಅರ್ಜಿ ಸಲ್ಲಿಸಿದ ದಿನಾಂಕದಿಂದ **60 ದಿನದೊಳಗಾಗಿ** ವಿಮಾ ಮೊಬಲಗು ದೊರೆಯುತ್ತದೆ.
3. ಈ ಯೋಜನೆಗಳ ನೋಂದಣಿಯನ್ನು ಬ್ಯಾಂಕ್ ಮತ್ತು ಅಂಚೆ ಕಛೇರಿಗಳಲ್ಲಿ ಜನಸುರಕ್ಷಾ ಪೋರ್ಟಲ್ ಹಾಗೂ ಮೊಬೈಲ್ ಅಪ್ಲಿಕೇಶನ್‌ಗಳಲ್ಲೂ ಸಹ ಪಡೆಯಬಹುದಾಗಿರುತ್ತದೆ.

ಪು.ತಿ.ನೋ

ಮೇಲಿನ ಉಲ್ಲೇಖಿತ **02**ರಲ್ಲಿ ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಎಲ್ಲಾ ನೌಕರರ ಪ್ರಸ್ತುತ ವೇತನ ಪಾವತಿ ಮಾಡುತ್ತಿರುವ ಬ್ಯಾಂಕ್ ಖಾತೆಯನ್ನು **Salary Package Account** ಆಯ್ಕೆ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ ಎಂದು ತಿಳಿಸಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಂದ ಆಡಳಿತಾತ್ಮಕ ಅನುಮತಿ ನೀಡುವಂತೆ ಕೋರಿರುತ್ತಾರೆ. ಮಾನ್ಯ ಕುಲಪತಿಯವರು ಅನುಮೋದಿಸಿದ್ದು ಅದರಂತೆ ಈ ಕೆಳಕಂಡ ಆದೇಶ.

**<u>ಆದೇಶ ಸಂಖ್ಯೆ: ಜಿಎಲ್.13/17/ಇತರೆ/2022–23, ದಿನಾಂಕ 24ನೇ ಜೂನ್ 2025</u>**

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ, 2024–25ನೇ ಸಾಲಿನ ಚಾಲೆಂಜ್ ಫಂಡ್ ಯೋಜನೆಯಡಿ ಸೃಜನಾತ್ಮಕವಾದ **ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (PMJJBY)** ಮತ್ತು **ಸುರಕ್ಷಾ ಬಿಮಾ ಯೋಜನೆಯ (PMSBY)** ನೋಂದಣಿ ಅಭಿಯಾನದ ಅನುಷ್ಠಾನ ಮಾಡುವ ಬಗ್ಗೆ ಎಲ್ಲಾ ವಿಶ್ವವಿದ್ಯಾನಿಲಯದ ನೌಕರರ ಪ್ರಸ್ತುತ ವೇತನ ಪಾವತಿ ಮಾಡುತ್ತಿರುವ ಬ್ಯಾಂಕ್ ಖಾತೆಯನ್ನು **Salary Package Account** ಆಯ್ಕೆ ಮಾಡಿಕೊಂಡು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಹಣಕಾಸು ಅಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಆಡಳಿತಾತ್ಮಕ ಅನುಮತಿ ನೀಡಲಾಗಿದೆ.

Chandrakekhara 24/6/25

ಉಪ ಕುಲಸಚಿವ(ಸಾಮಾನ್ಯ)
ಆಡಳಿತ
ಮೈ.ವಿ.ವಿ. ಮೈಸೂರು

| ಕುಲಸಚಿವರಿಂದ ಕರಡು ಅನುಮೋದಿಸಿದೆ |
|---|

**<u>ಇವರಿಗೆ:</u>**

1. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರು/ಸಂಯೋಜನಾಧಿಕಾರಿಗಳು/ ಪ್ರಾಂಶುಪಾಲರು/ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಸಂಯೋಜಕರು, ಮಾಹಿತಿ ಸಂವಹನ ವಿಭಾಗ(ಐ.ಸಿ.ಡಿ), ಮಾನಸಗಂಗೋತ್ರಿ, ಮೈಸೂರು–ವಿ.ವಿ. ಜಾಲತಾಣದಲ್ಲಿ ಪ್ರಕಟಿಸುವುದು.
4. ಎಲ್ಲಾ ಉಪ ಕುಲಸಚಿವರು, ಆಡಳಿತ/ಪರೀಕ್ಷಾಂಗ/ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಪ್ರಾಂತೀಯ ಕಛೇರಿ, ಪರೀಕ್ಷಾ ಭವನ ಕಟ್ಟಡ, ಕ್ರಾಫರ್ಡ್ ಭವನ ಆವರಣ, ಮೈಸೂರು.
6. ಮಾನ್ಯ ಕುಲಪತಿಯವರ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.